
ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ



ಮಹಾತ್ಮ ಗಾಂಧೀ ಮತ್ತು ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

ಕನ್ನಡಾನುವಾದ : ಬಿ.ಎಸ್. ಜಯಪ್ರಕಾಶ್

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಮಹಾತ್ಮ ಗಾಂಧಿ
ಮತ್ತು
ಆಧ್ಯಾತ್ಮಿಕ ರಾಜಕಾರಣ

ಮೂಲ ಇಂಗ್ಲಿಷ್ ಭಾಷೆ

ಡಾ. ವೂಡೇ ಪಿ. ಕೃಷ್ಣ

ಕನ್ನಡಾನುವಾದ : ಬಿ.ಎಸ್. ಜಯಪ್ರಕಾಶ್

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ
ಲೇಖಕರು : ಡಾ. ವೂಡೇ ಪಿ. ಕೃಷ್ಣ
ಕನ್ನಡಕ್ಕೆ ಅನುವಾದ ಬಿ.ಎಸ್. ಜಯಪ್ರಕಾಶ್
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ : 2018 (ಗಾಂಧಿ ಶಾಂತಿ ಪ್ರತಿಷ್ಠಾನದಿಂದ)

ಪರಿಷ್ಕೃತ ಆವೃತ್ತಿ : 2019

ಪ್ರತಿಗಳು : 1000

ಪುಟಗಳು : 36

ಬೆಲೆ : 28/-

ISBN No : 978-81-941136-0-7

ಮುಖಪುಟ ಚಿತ್ರ : ಡಾ. ಎಸ್.ಎಂ. ಪಂಡಿತ್
ಪ್ರಖ್ಯಾತ ಚಿತ್ರ ಕಲಾವಿದರು

ಮುದ್ರಕರು : ಕ್ರಿಯೇಟಿವ್‌ಗೀಕ್ಸ್
ಯಾದವ ಕಾಲೇಜು ರಸ್ತೆ, ಮಾಧವನಗರ
ಬೆಂಗಳೂರು – 560001
ದೂರವಾಣಿ : 080 40927049




ಅರ್ಪಣೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾಗಿದ್ದ

ಶ್ರೀ ಎಸ್.ಕೆ. ಮೋಹನ್ ಅವರಿಗೆ

ಗೌರವಪೂರ್ವಕವಾಗಿ



ಶುದ್ಧ ಹೃದಯ ಮತ್ತು ಶುದ್ಧ ಹಸ್ತಗಳಿಲ್ಲದ
ಯಾವನೂ ಸ್ವಾತಂತ್ರ್ಯ ದೇವತೆಯ
ಪೂಜಾ ಪೀಠದ ಹತ್ತಿರ ಹೋಗಲಾರನು.

– ಮಹಾತ್ಮ ಗಾಂಧಿ

ಪ್ರಕಾಶಕರ ಮಾತು

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಗಾಂಧೀಜಿ ಅವರ ಆಧ್ಯಾತ್ಮಿಕ ರಾಜಕಾರಣದ ಕುರಿತು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ರಚಿಸಿ ಪ್ರಕಟಣೆಗಾಗಿ ಗಾಂಧಿ ಭವನಕ್ಕೆ ಕೊಟ್ಟಿರುವುದಕ್ಕೆ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಬಾ ಮತ್ತು ಬಾಪು 150ರ ವರ್ಷಾಚರಣೆಯ ಪುಸ್ತಕ ಪ್ರಕಟಣಾ ಮಾಲಿಕೆಯಲ್ಲಿ ಈ ಕೃತಿ ಪ್ರಕಟಿಸಲು ಹರ್ಷವಾಗುತ್ತದೆ.

ಡಾ. ವೂಡೇ ಪಿ. ಕೃಷ್ಣ ಅವರು ನಿರಂತರ ಅಧ್ಯಯನಶೀಲರು ಮತ್ತು ಅಧ್ಯಯನದ ಗ್ರಹಿಕೆಯನ್ನು ಅನುಷ್ಠಾನಗೊಳಿಸಲು ಸದಾ ಪ್ರಯತ್ನದಲ್ಲಿರುವವರಾಗಿದ್ದಾರೆ. ಅಧ್ಯಾತ್ಮಿಕತೆಯನ್ನು ಋಷಿಗಳು, ಸಂತರು ಮತ್ತು ಗುರುಗಳು ಮಾತ್ರ ಅರ್ಥೈಸಿಕೊಳ್ಳುವವರಾಗಿದ್ದಾರೆ. ಸಾಮಾನ್ಯ ಜನರಿಗೆ ಅದು ನಿಲುಕದ ನಕ್ಷತ್ರ; ರಾಜಕಾರಣಕ್ಕೂ, ಅಧ್ಯಾತ್ಮಿಕತೆಗೂ ಭೂಮಿ-ಆಕಾಶದಷ್ಟು ಅಂತರ; ಎನ್ನುವ ಸಾಮಾನ್ಯ ಜನರಅರಿವನ್ನು,ಪರಿವರ್ತಿಸಿ "ಅಧ್ಯಾತ್ಮಿಕತೆಯೇಜೀವನವಿಧಾನವೆಂಬ" ಗಾಂಧೀಜಿ ಅವರ ಮಾರ್ಗವನ್ನು ಸರಳ ಸುಂದರವಾಗಿ ತಿಳಿಸಿಕೊಡುವ ಈ ಕಿರು ಕೃತಿ ಅನನ್ಯವಾದುದಾಗಿದೆ. ರಾಜಕಾರಣವೂ ಸತ್ಯ, ಸರಳತೆ, ಅಹಿಂಸೆ, ನಿರ್ಭೀತಿತನ, ಸಮಷ್ಠಿಪ್ರಜ್ಞೆ, ಪ್ರೀತಿ, ಕಾಯಕ, ಪ್ರಾಮಾಣಿಕತೆ, ನ್ಯಾಯದ ನಡೆ ಮತ್ತು ಎಲ್ಲರನ್ನೂ ಒಳಗೊಳ್ಳುವಿಕೆ, ತತ್ವದ ಆಧಾರದ ಮೇಲಿದ್ದಾಗಲೇ, ಅದು ಅಧ್ಯಾತ್ಮಿಕತೆಯ ಹಾದಿಯಲ್ಲಿ ಸಾಗುತ್ತಿದೆ ಎಂದೇ ಹೇಳಬಹುದೆಂಬುದನ್ನು ಇದರಲ್ಲಿ

ಮನೋಜ್ಞವಾಗಿ ತಿಳಿಸಲಾಗಿದೆ. ಎಲ್ಲಾ ರಾಜಕೀಯ ನೇತಾರರು, ದಾರ್ಶನಿಕರು, ರಾಜಕೀಯ ಮುತ್ಸದಿಗಳು, ಈ ಮಾರ್ಗದಲ್ಲಿ ನಡೆದಾಗ ಮಾತ್ರ ಗಾಂಧೀಜಿ ಅವರ ಆಶಯದ ಭಾರತದ ನಿರ್ಮಾಣವಾಗುವಲ್ಲಿ ಎಳ್ಳಷ್ಟೂ ಸಂಶಯವಿರುವುದಿಲ್ಲ. ಅಂಥಹ ಆದರ್ಶದ ಭಾರತವನ್ನು ಆಶಿಸಿ, ರಚಿಸಿದ ಈ ಕೃತಿ ಸರ್ವ ಮಾನ್ಯವಾಗಲಿ ಎಂದು ಹಾರೈಸುತ್ತೇನೆ.

ಸಂಸ್ಕೃತ ವಿಶ್ವ ವಿದ್ಯಾಲಯದಲ್ಲಿ 'ವಿಶ್ವ ತತ್ವಶಾಸ್ತ್ರ'ದ ದಿನದ ವಿಚಾರ ಸಂಕಿರಣದಲ್ಲಿ ಡಾ. ವೂಡೇ. ಪಿ. ಕೃಷ್ಣ ಅವರು ಆಂಗ್ಲ ಭಾಷೆಯಲ್ಲಿ ಮಂಡಿಸಿದ ಈ ಉಪನ್ಯಾಸವನ್ನು ಅರ್ಥಗರ್ಭಿತವಾಗಿ ಕನ್ನಡಕ್ಕೆ ಅನುವಾದಿಸಿದ ಬಿ.ಎಸ್. ಜಯಪ್ರಕಾಶ್ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಗಾಂಧಿ ಪ್ರತಿಷ್ಠಾನದವರು ಈ ಕೃತಿಯನ್ನು 2018ರಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟಿಸಿದ್ದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಿಂದ ಈ ಕೃತಿಯ 2ನೇ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಲು ಮನಃಪೂರ್ವಕವಾಗಿ ಒಪ್ಪಿಗೆ ನೀಡಿರುವ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ನಮನಗಳು ಸಲ್ಲುತ್ತವೆ.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಮುನ್ನುಡಿ

ಭಾರತಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳು ಕಳೆದಿವೆ. ಮಹಾತ್ಮ ಗಾಂಧೀಜಿ ಅವರ 'ಹಿಂದ್ ಸ್ವರಾಜ್' (1909) ಪ್ರಕಟವಾಗಿ ಇಲ್ಲಿಗೆ ಒಂದುನೂರ ಹತ್ತು ವರ್ಷಗಳು ಸಲ್ಲುತ್ತಿವೆ. ಸ್ವಾತಂತ್ರ್ಯ ಪೂರ್ವ ಭಾರತ ಮತ್ತು ಸ್ವಾತಂತ್ರ್ಯೋತ್ತರ ಭಾರತ ಇವುಗಳ ನಡುವಣ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಔದ್ಯೋಗಿಕ ನೆಲೆಗಳ ಬಗೆಗೆ ಅನೇಕರು ಚರ್ಚಿಸಿದ್ದಾರೆ. ಈಗಲೂ ಚರ್ಚಿಸುತ್ತಿದ್ದಾರೆ. ಅವುಗಳು ಬಹುತೇಕವಾಗಿ ಪಕ್ಷಪಕ್ಷಗಳು ಧೋರಣೆಯೋ ಸೈದ್ಧಾಂತಿಕ ಹಿನ್ನೆಲೆಯೋ ವಸಾಹತುಶಾಹಿ ಮನಃಸ್ಥಿತಿಗಳಿಂದಲೋ ಇರುವುದುಂಟು! ಶುದ್ಧವಾದ ಸತ್ಯಸಿದ್ಧಾಂತ ಅಥವಾ ಗಾಂಧೀಜಿ ಕಂಡ ಕನಸಿನ ಭಾರತವನ್ನು ಕುರಿತು ಪೂರ್ಣ ದೃಷ್ಟಿಯಿಂದ ಮಾತನಾಡುವುದು ಈಗಂತೂ ತುಂಬಾ ಅವಶ್ಯವಿದೆ. ಕುವೆಂಪು ಅವರು ಪೂರ್ಣದೃಷ್ಟಿ, ಸಮನ್ವಯ ಮತ್ತು ಅನಿಕೇತನ ಪ್ರಜ್ಞೆಯನ್ನು ತಮ್ಮ ಕೃತಿಗಳಲ್ಲಿ ಸಾರಿದರು. ಅವು ಕವಿಸಹಜ ಮಾತಿನಿಂದ ರೂಪಿತಗೊಂಡಿದ್ದವು. ಈ ಮಾತುಗಳನ್ನು 'ಆಧ್ಯಾತ್ಮೀಕರಣ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಡಾ. ವೂಡೇ ಪಿ. ಕೃಷ್ಣ ಅವರು ವಿಶ್ಲೇಷಿಸುತ್ತಿದ್ದಾರೆ.

ಡಾ. ವೂಡೇ ಪಿ. ಕೃಷ್ಣ ಅವರು ಶ್ರೀರಾಮಕೃಷ್ಣ ಪರಮಹಂಸ– ಸ್ವಾಮಿ ವಿವೇಕಾನಂದರ ಅಗ್ನಿದಿವ್ಯದಿಂದ ಎದ್ದು ಬಂದವರು. ಗಾಂಧೀಜಿ ಅವರ ಅಹಿಂಸೆ ಮತ್ತು ಸತ್ಯಾಗ್ರಹ ಇವೆರಡರ ದೃಷ್ಟಿಯಿಂದ

ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಯನ್ನು ಕ್ಷಕಿರಣದ ದೃಷ್ಟಿಯಿಂದ ನೋಡಿದವರು. ಪಕ್ಷ, ವ್ಯಕ್ತಿ ಎಲ್ಲರಲ್ಲೂ ಇರುವುದು ಆಂಶಿಕ ದೃಷ್ಟಿಯೇ ಹೊರತು, ಸಮಷ್ಟಿ ದೃಷ್ಟಿಯಲ್ಲ. ವೈಯಕ್ತಿಕ ಹಿತಾಸಕ್ತಿ ನಮ್ಮನ್ನು ಅಪಾಯದ ಅಂಚಿಗೆ ಕರೆದೊಯ್ಯುವುದೆಂಬುದು ನಿಶ್ಚಿತ. ಆದರೆ, ವೈಯಕ್ತಿಕತೆಯನ್ನು ಮೀರಿ ಸಾರ್ವಜನಿಕ ದೃಷ್ಟಿಯನ್ನು ಪಡೆಯುವುದು ಇಂದಿನ ಅಗತ್ಯಗಳಲ್ಲಿ ಒಂದು. ಅದು ಪೂರೈಸಬೇಕಾದರೆ, ಗಾಂಧೀಜಿ ಅವರ ಮಾರ್ಗದರ್ಶನಕ್ಕೆ ನಾವು ತಲೆಬಾಗಲೇಬೇಕಾಗುತ್ತದೆ. ನಾವಿಂದು ಗಾಂಧೀಜಿ ಅವರನ್ನು ಕೇವಲ ಸಾಂಕೇತಿಕವಾಗಿ ಗುರುತಿಸಿಕೊಳ್ಳುತ್ತಿದ್ದೇವೆ. ಅವರು ಸಾರಿದ ಮಾರ್ಗದರ್ಶನವನ್ನು ನಾವಿನ್ನೂ ಆತ್ಮಸಾತ್ ಮಾಡಿಕೊಳ್ಳುತ್ತಿಲ್ಲ. ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನೂ ನಾವು ಮಾಡಿಕೊಳ್ಳುತ್ತಿಲ್ಲ. ಗಾಂಧೀಜಿ ಆದರ್ಶ ಕೇವಲ ಕನ್ನಡಿಯ ಗಂಟಾಗಿದೆ. ಅದು ನಮ್ಮ ಬದುಕಿನ ವಾಸ್ತವಕ್ಕೆ ದೀವಿಗೆಯಾಗಬೇಕಾಗಿದೆ. ಆ ದಿಕ್ಕಿನಲ್ಲಿ ನಾವೆಲ್ಲಾ ಸಾಗಬೇಕಾಗಿದೆ. ಇದು ವೂಡೇ ಪಿ. ಕೃಷ್ಣ ಅವರ ಪ್ರಾಮಾಣಿಕವಾದ ಕಳಕಳಿ. ಸಮಸ್ತ ಕ್ರಿಯಾಕಲಾಪಗಳೆಲ್ಲವೂ ಆಧ್ಯಾತ್ಮೀಕರಣದಲ್ಲಿ ಸಂಭವಿಸಬೇಕೆಂಬ ಗಾಢವಾದ ನಂಬುಗೆ.

ಈ ಸಂಗತಿಗಳ ಹಿನ್ನೆಲೆಯಲ್ಲಿ ಡಾ. ವೂಡೇ ಪಿ. ಕೃಷ್ಣ ಅವರ ಇಲ್ಲಿಯ ಮಾತುಗಳನ್ನು ಕಳಕಳಿಯಿಂದ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮ ನಿಷ್ಠೆ ಮತ್ತು ನಡವಳಿಕೆಗಳು ರಾಷ್ಟ್ರಪ್ರಜ್ಞೆಗೆ ಅಧೀನವಾಗಿರಬೇಕು. ನಮ್ಮ ದೇಶದ ಮೌಲ್ಯಗಳಿಗೆ ನಾವು ತಲೆಬಾಗಬೇಕು. ಆದರೆ ನಾವು ಇದರಿಂದಾಗಿ ಕ್ರಮಕ್ರಮವಾಗಿ ಹಿಂದೆ ಸರಿಯುತ್ತಿದ್ದೇವೆ. ಇಂದಿನ ರಾಜಕಾರಣಿಗಳು ನಿಜವಾದ ವಿರಕ್ತರಾಷ್ಟ್ರಕರಾಗಬೇಕಿತ್ತು. ಆಗ ವೈಯಕ್ತಿಕತೆಯು ಸಾರ್ವತ್ರಿಕ ಭಾವನೆಯಲ್ಲಿ ಅದ್ದಿಹೋಗುತ್ತಿತ್ತು. ನಮ್ಮ ಭಾವಗಳು ನಿಂತ ನೀರಾಗಕೂಡದಷ್ಟೆ. ನಮ್ಮ ಆಲೋಚನೆಗಳು

ಮಹದಾಲೋಚನೆಗಳಾಗಿ ಜನಮನವನ್ನು ಆವರಿಸಿಕೊಳ್ಳಬೇಕು. ನಾವು ರೋಗಮುಕ್ತ ಅಥವಾ ಸ್ವಚ್ಛಯುಕ್ತ ಭಾರತವನ್ನು ರೂಪಿಸಬೇಕೆಂಬ ಹಂಬಲದಲ್ಲಿ ಮಾನಸಿಕ ಸ್ವಚ್ಛತೆಯಿಂದ ದೂರ ಸರಿದುಬಿಡುತ್ತಿದ್ದೇವೆ. ಇದು ಕಳವಳಕಾರಿ ಸಂಗತಿ.

ಡಾ. ವೂಡೇ ಪಿ. ಕೃಷ್ಣ ಅವರು ಸಮಾಜ–ದೇಶ–ರಾಜಕಾರಣ; ರಾಷ್ಟ್ರದ ಅಭಿವೃದ್ಧಿ ಮೀಮಾಂಸೆ, ರಾಜ್ಯದ ಪುನರುತ್ಥಾನ ಇವುಗಳೆಲ್ಲವೂ ಇದೀಗ ಹಳ್ಳ ಹಿಡಿಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಬಹಿರಂಗದ ವಿಜೃಂಭಣೆಯಲ್ಲಿ ಎಲ್ಲರೂ ಮುಳುಗೇಳುತ್ತಿದ್ದಾರೆ; ಅಂತರಂಗದ ಶಾಂತಿ ಸ್ಥಿತಿಯ ರಹಸ್ಯವನ್ನು ಯಾರೂ ಆಚರಿಸುತ್ತಿಲ್ಲ. ನಾವು ಮಾತಿಗಿಂತ, ಮೌನಕ್ಕೆ, ಅದಮ್ಯಭಾವಕ್ಕೆ, ಸತ್ಯದ ನಿಲುಗಡೆಗೆ ಸಾಗಬೇಕಾಗಿದೆ. ಇಂಥ ತಾತ್ವಿಕ ಮುಕ್ತ ಚರ್ಚೆಯಿಂದ ಮಾತ್ರ ಸಮಾಜವನ್ನೂ ಗಾಂಧೀ ಪ್ರಣೀತ 'ರಾಮರಾಜ್ಯ'ವನ್ನೂ ನಾವು ಕಾಣಬಹುದಾಗಿದೆ. ನಮಗೆ ಅಧ್ಯಾತ್ಮ ಜಗತ್ತಿನ ಸಂಕೇತವಾಗಿ ಶ್ರೀರಾಮಕೃಷ್ಣ ಪರಮಹಂಸ ಮತ್ತು ಶ್ರೀರಮಣರಿದ್ದಾರೆ. ರಾಷ್ಟ್ರಕುಂಡಲಿನಿಯ ಸಮಸ್ತವನ್ನು ಜಾಗೃತಗೊಳಿಸಲು ಸ್ವಾಮಿ ವಿವೇಕಾನಂದರು ಹಲವು ರೂಪಗಳಲ್ಲಿ ನಮ್ಮೊಡನೆ ಇದ್ದಾರೆ. ನಮ್ಮ ನೆಲೆಯನ್ನು ನಾವು ತಿಳಿಯುತ್ತ, ಪ್ರತಿದಿನವೂ ವಿರಕ್ತರಾಷ್ಟ್ರಕರಾಗಿಯೇ ಉಳಿಯಲು ಮಹಾತ್ಮ ಗಾಂಧೀಜಿ ಅವರು ನಮ್ಮೊಡನೆ ಇದ್ದಾರೆ. ಡಾ. ವೂಡೇ ಪಿ. ಕೃಷ್ಣ ಅವರು ಈ ದಿಕ್ಕಿನಲ್ಲಿ ನಡೆಸಿರುವ ಚಿಂತನೆಗಳು ನಮ್ಮ ರಾಷ್ಟ್ರ ಬದುಕಿಗೆ ಸಮೀಪವಾಗಿವೆ. ನಮ್ಮ ಬದುಕಿಗೆ ಕೈದೀವಿಗೆಯಾಗಿವೆ. ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಿದ ಪ್ರಸಂಗಗಳನ್ನೂ ಘಟನೆಗಳನ್ನೂ ಹೇಳಿದ್ದಾರೆ. ಅವರ ಪ್ರತಿ ಹೆಜ್ಜೆಯು ಆಧ್ಯಾತ್ಮಿಕವೇ ಆದ ಬಗೆಗಳನ್ನು ಇಲ್ಲಿ ತಿಳಿಸಿದ್ದಾರೆ. ನಮ್ಮ ನಾಡಿನ ಪ್ರತಿಯೊಬ್ಬ ರಾಜಕಾರಣಿಯೂ ಈ ಹೊತ್ತಿಗೆಯನ್ನು ಓದಬೇಕು. ರಾಷ್ಟ್ರ–ಅಧ್ಯಾತ್ಮ–

ಸಮಾಜ ತ್ರಿವಳಿ ಗೀತೆಗಳ ನಡುವೆ ಅವರು ಧ್ಯಾನಸ್ಥರಾಗಬೇಕು. ಇಂಥದೊಂದು ಅಪೂರ್ವ ಕಿರುಹೊತ್ತಿಗೆಯನ್ನು ರಚಿಸಿಕೊಟ್ಟ ಡಾ. ವೂಡೇ ಪಿ. ಕೃಷ್ಣ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಇದು 2017ರ 'ವಿಶ್ವ ತತ್ವಶಾಸ್ತ್ರ ದಿನ'ದಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಭಾರತೀಯ ತತ್ತ್ವಶಾಸ್ತ್ರ ಸಂಶೋಧನಾ ಪರಿಷತ್ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ನೀಡಿದ ಇಂಗ್ಲಿಷ್ ಉಪನ್ಯಾಸವನ್ನು ಶ್ರೀ ಬಿ. ಎಸ್. ಜಯಪ್ರಕಾಶ್ ಅವರು ಕನ್ನಡಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ವಿಶ್ರಾಂತ ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ

ಪರಿವಿಡಿ



ಸೇವೆಗಾಗಿಯೇ ಸೇವೆ ಮಾಡುವುದೇ
ಅತ್ಯಂತ ಉದಾತ್ತವಾದ ಸೇವೆ ಎನಿಸುವುದು.

– ಮಹಾತ್ಮ ಗಾಂಧೀ

ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

'ವಿಶ್ವ ತತ್ವಜ್ಞಾನ ದಿನ'ವಾದ ಇಂದು 'ಮಹಾತ್ಮ ಗಾಂಧಿ : ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎನ್ನುವ ವಿಚಾರ ಕುರಿತು ನನ್ನ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ನನ್ನನ್ನು ಇಲ್ಲಿಗೆ ಆಹ್ವಾನಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಭಾರತೀಯ ತತ್ವಜ್ಞಾನ ಸಂಶೋಧನಾ ಪರಿಷತ್ತಿಗೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ಇತ್ತೀಚೆಗೆ ನಡೆದ ಒಂದು ಸಮಾರಂಭದಲ್ಲಿ ಮಾತನಾಡಿದ ಹೆಸರಾಂತ ವಿದ್ವಾಂಸರಾದ ವಿದ್ವಾನ್ ಕೆ. ಜಿ. ಸುಬ್ರಾಯ ಶರ್ಮರು ಈ ಕೆಳಕಂಡ ಸಾಲುಗಳ ಮೂಲಕ ಗಾಂಧೀಜಿ ಅವರಿಗೆ ತಮ್ಮ ನಮನಗಳನ್ನು ಸಲ್ಲಿಸಿದರು.

ಆ ಸಾಲುಗಳು ಹೀಗಿವೆ ;

ಪಿತಾಮಹಾಯ ರಾಷ್ಟಸ್ಯ
ಸತ್ಯಸಂಧಾಯ ಧೀಮತೆ
ಈಶಾಗೀತಾರ್ಥ ನಿಷ್ಠಾಯ
ಮಹಾತ್ಮ ಗಾಂಧಿನೇ ನಮಃ

ನಿಜ, ಗಾಂಧೀಜಿ ಅವರು ಈಶನಿಷ್ಠರೂ, ಗೀತೆಯ ನಿಷ್ಠರೂ, ರಾಮ ಭಕ್ತರೂ ಆಗಿದ್ದರು. ಎಂಥ ಅನರ್ಘ್ಯ, ಅಮೂಲ್ಯವಾದ ಮಾತುಗಳನ್ನು ಶರ್ಮರು ಆಡಿದ್ದಾರೆ.

ಆತ್ಮವಿಮರ್ಶೆ

ಗಾಂಧೀಜಿ ಅವರನ್ನು ಮನುಕುಲದ ಸಕ್ರಿಯ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರೆಂದು ಗುರುತಿಸಲಾಗಿದೆ. ಏಕೆಂದರೆ, ಈ ಲೌಕಿಕ ಜಗತ್ತಿನಲ್ಲಿದ್ದುಕೊಂಡೇ ಆಧ್ಯಾತ್ಮಿಕತೆಯನ್ನು ಅವರು ರೂಢಿಸಿಕೊಂಡಿದ್ದರು. ಅವರು ಸುತ್ತಮುತ್ತಲಿನ ಅನ್ಯಾಯ, ದ್ವೇಷ, ಕ್ಷುಲ್ಲಕತೆ, ಭಯ ಮತ್ತು ಹಿಂಸೆ ಇವುಗಳನ್ನೆಲ್ಲ ನ್ಯಾಯ, ಪ್ರೀತಿ, ಕರುಣೆ, ಸಮಚಿತ್ತ, ಧೈರ್ಯ ಮತ್ತು ಅಹಿಂಸೆಗಳ ಮೂಲಕವೇ ನಿವಾರಿಸಲು ಶ್ರಮಿಸಿದರು. ಗಾಂಧೀಜಿ ಅವರ ಬದುಕು, ಅವರ ಕಾಲದ ಉಳಿದೆಲ್ಲ ನಾಯಕರ ಬದುಕಿಗಿಂತ ಅತ್ಯಂತ ಪಾರದರ್ಶಕವಾಗಿತ್ತು. ಹೀಗಾಗಿಯೇ ಅವರು 'ನನ್ನ ಬದುಕೇ ನನ್ನ ಸಂದೇಶ' ಎಂದು ಘೋಷಿಸಿದರು.

ಗಾಂಧೀಜಿ ಅವರ ಆತ್ಮಕತೆ 'ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' (ನನ್ನ ಸತ್ಯಾನ್ವೇಷಣೆ) 1927ರಲ್ಲಿ ಪ್ರಕಟವಾಯಿತಷ್ಟೆ. ಅವರ 1920ರವರೆಗಿನ ಬದುಕಿನ ಕಥನವನ್ನು ಅದು ಒಳಗೊಂಡಿದೆ. ಈ ಆತ್ಮಕತೆಯಲ್ಲಿ ಗಾಂಧೀಜಿ ಅವರು ತಮ್ಮ ಬಾಲ್ಯ ಮತ್ತು ಪ್ರಾಯದ ದಿನಗಳಲ್ಲಿ ಆಧ್ಯಾತ್ಮಿಕತೆಯು ಹೇಗೆ ಪ್ರಭಾವ ಬೀರಿತು ಎನ್ನುವುದನ್ನು ಧೀರ್ಘವಾಗಿ ಹೇಳಿಕೊಂಡಿದ್ದಾರೆ. ಬಾಲ್ಯದಲ್ಲಿ ಸತ್ಯಹರಿಶ್ಚಂದ್ರನನ್ನು ಕುರಿತು ನಾಟಕವನ್ನು ನೋಡಿ, ಅದರಿಂದ ಪ್ರಭಾವಿತರಾದ ಗಾಂಧೀಜಿ, ಜೀವನದಲ್ಲಿ ಯಾವತ್ತಿಗೂ ಸುಳ್ಳು ಹೇಳಬಾರದೆಂದು ತೀರ್ಮಾನಿಸಿದರು. ಅಷ್ಟೇ ಅಲ್ಲ, ಅವರು ಅಲ್ಲಿಂದಾಚೆಗೆ ತಮ್ಮ ಕೊನೆಯುಸಿರು ಇರುವವರೆಗು ಸುಳ್ಳನ್ನಾಡಲಿಲ್ಲ. ಅವರ ಪಾಲಿಗೆ 'ಸತ್ಯವೇ ದೇವರು ಮತ್ತು ದೇವರೇ ಸತ್ಯ'ವಾಗಿತ್ತು. ಆಧ್ಯಾತ್ಮಿಕತೆಯ ದೃಷ್ಟಿಯಿಂದ ಹೇಳುವುದಾದರೆ, ಗಾಂಧೀಜಿ ಅವರು ತಮ್ಮ ತಾಯಿ-ತಂದೆ ಮತ್ತು ಸಂತ ಜೈನ ಕವಿ ಶ್ರೀಮದ್ ರಾಜಚಂದ್ರ ಅವರಿಂದ ಪ್ರಭಾವಿತರಾಗಿದ್ದರು. ಅಂದಹಾಗೆ, ಇದು ಶ್ರೀಮದ್ ರಾಜಚಂದ್ರ ಅವರ 150ನೇ ಜನ್ಮ ದಿನಾಚರಣೆಯ ವರ್ಷವಾಗಿದೆ. ಇಂಥ

ಗಾಂಧೀಜಿ ಅವರು ಭಗವದ್ಗೀತೆ, ಬೈಬಲ್, ಲಿಯೋ ಟಾಲ್ಸ್ಟಾಯ್ ಅವರ 'ಕಿಂಗ್ಡಮ್ ಆಫ್ ಗಾಡ್ ಈಸ್ ವಿತಿನ್ ಯು,' ಗ್ರಂಥಗಳನ್ನು ಓದಿದ್ದರು. ಅಲ್ಲದೆ, ಥೋರೊನ 'ಸಿವಿಲ್ ಡಿಸ್ಒಬಿಡಿಯನ್ಸ್' ಮತ್ತು ರಸ್ಕಿನ್ ಬಾಂಡ್‌ನ 'ಅನ್ ಟು ದಿಸ್ ಲಾಸ್ಟ್' ಕೃತಿಗಳಿಂದಲೂ ಅವರು ಅಪಾರ ಪ್ರಭಾವಕ್ಕೊಳಗಾಗಿದ್ದರು.

ರಾಜಕಾರಣದ ನೆಲೆ-ಬೆಲೆ

ಗಾಂಧೀಜಿ ಅವರು 'ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎಂಬ ಅನನ್ಯವಾದ ಗೌರವಕ್ಕೆ ಪಾತ್ರರಾಗಿದ್ದಾರೆ, ನಿಜ. ಇದರ ಬುನಾದಿ, ಅವರ ದಕ್ಷಿಣ ಆಫ್ರಿಕಾದ ದಿನಗಳಲ್ಲೇ ಇದೆ. ಏಕೆಂದರೆ, ಅವರು ಆ ದೇಶದಲ್ಲಿದ್ದಾಗಲೇ ಮೊದಲಿಗೆ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟವನ್ನು ನಡೆಸಿದ್ದರು. ದರ್ಬಾನ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿ ಅವರನ್ನು ಅಲ್ಲಿಯ ಬಿಳಿಯನೊಬ್ಬ 'ನೀನೊಬ್ಬ ಕರಿಯ, ನಿನಗಿಲ್ಲಿ ಜಾಗವಿಲ್ಲ,' ಎಂದು ಬೈದು, ಹೊರದಬ್ಬಿದ್ದನು. ಆ ಒಂದು ಘಟನೆಯು, ಗಾಂಧೀಜಿ ಅವರು ತಮ್ಮ ಜೀವಮಾನದುದ್ದಕ್ಕೂ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಲು ನಾಂದಿ ಹಾಡಿತು. ಇದು ತನ್ನಷ್ಟಕ್ಕೆ ತಾನೇ ಒಂದು ಬಹುದೊಡ್ಡ ಆಧ್ಯಾತ್ಮಿಕ ಪರಿವರ್ತನೆಯಾಯಿತು. ಗಾಂಧೀಜಿ ಅವರು 'ಸತ್ಯ' ಮತ್ತು 'ಅಹಿಂಸೆ'ಗಳ ದೀಕ್ಷೆ ತೆಗೆದುಕೊಂಡಿದ್ದು ಕೂಡ ದಕ್ಷಿಣ ಆಫ್ರಿಕಾದಲ್ಲಿಯೇ. ಈ ಬಗ್ಗೆ ಅವರು "ಈ ಎರಡೂ ಆದರ್ಶಗಳು ಜಗತ್ತಿನಲ್ಲಿರುವ ಗಿರಿಸಾಲುಗಳಷ್ಟೇ ಪುರಾತನವಾದವು. ನಾನೇನಿದ್ದರೂ ಈ ಆದರ್ಶಗಳನ್ನು ನನ್ನ ಬದುಕು ಮತ್ತು ಕ್ರಿಯೆಯಲ್ಲಿ ಅನುಸರಿಸಲು ಪ್ರಯತ್ನಿಸುತ್ತಿದ್ದೇನಷ್ಟೆ," ಎಂದು ಹೇಳುತ್ತಿದ್ದರು.

1909ರಲ್ಲಿ ಗಾಂಧೀಜಿ ಅವರು ತಮ್ಮ ಅಸಾಧಾರಣ ಕೃತಿಯಾದ 'ಹಿಂದ್ ಸ್ವರಾಜ್' ಅನ್ನು ಪ್ರಕಟಿಸಿದರು. ಇದಾದ ಆರು ವರ್ಷಗಳ ನಂತರ, ಅಂದರೆ 1915ರಲ್ಲಿ ಅವರು

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ತಾಯ್ನಾಡಿಗೆ ಬಂದವರೇ, ತಮ್ಮ ರಾಜಕೀಯ ಮಾರ್ಗದರ್ಶಕರಾದ ಶ್ರೀ ಗೋಪಾಲಕೃಷ್ಣ ಗೋಖಲೆ ಅವರ ಸಲಹೆಯ ಮೇರೆಗೆ ಇಡೀ ದೇಶವನ್ನು ಸುತ್ತಿದರು. ಈ ಮೂಲಕ ಅವರು ತಮ್ಮನ್ನು ತಾವು ಶ್ರೀಸಾಮನ್ಯನೊಂದಿಗೂ ಆತನ ಕಷ್ಟ-ನಷ್ಟಗಳೊಂದಿಗೂ ಗುರುತಿಸಿಕೊಂಡರು. "ನೀನು ಜನರ ಬಳಿಗೆ ಹೋಗು, ಅವರೊಡನೆ ಬದುಕು, ಅವರನ್ನು ಅರ್ಥ ಮಾಡಿಕೊ ಮತ್ತು ಅವರಿಂದ ಕಲಿ," ಎನ್ನುವುದು ಗೋಖಲೆ ಅವರು ಗಾಂಧೀಜಿಗೆ ಹೇಳಿದ ಸಾಮಾಜಿಕ ಪಾಠವಾಗಿತ್ತು. ಅಲ್ಲದೆ, ಭಾರತಕ್ಕೆ ಬಂದಿಳಿದ ಗಾಂಧೀಜಿಗೆ ಅವರು "ನೀನು ಒಂದು ವರ್ಷ ಮೌನವಾಗಿರಬೇಕು," ಎಂದು ಹೇಳಿದ್ದರು. ಗೋಖಲೆ ಅವರ ಮಾತಿಗೆ ಬೆಲೆ ಕೊಟ್ಟು ಇಡೀ ಭಾರತದಾದ್ಯಂತ ಕೈಗೊಂಡ ಈ ಪಯಣವೇ ಅದುವರೆಗೂ 'ಬ್ಯಾರಿಸ್ಟರ್' ಆಗಿದ್ದ ಗಾಂಧೀಜಿ ಅವರನ್ನು 'ಬಡವರ ಸೇವಕ'ನನ್ನಾಗಿ ಪರಿವರ್ತಿಸಿತು.

ಆನಿಬೆಸೆಂಟ್ ಅವರು ಏರ್ಪಡಿಸಿದ್ದ ಒಂದು ರಾಜಕೀಯ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಗಾಂಧೀಜಿ, ಅಲ್ಲಿ ಆತ್ಮವಿಮರ್ಶೆ, ಸಮೂಹ ಶಿಕ್ಷಣ, ದುರಾಸೆಯ ನಿಗ್ರಹ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ದೇವರಲ್ಲಿ ಇಡಬೇಕಾದ ನಂಬಿಕೆ ಇವುಗಳನ್ನು ಪ್ರತಿಪಾದಿಸಿ, ಮನುಷ್ಯನೊಬ್ಬನ ಯಶಸ್ಸಿಗೆ ಇದೇ ಸರಿಯಾದ ಹಾದಿ ಎಂದು ಸಾರಿದ್ದರು. ಅವರ 'ಆತ್ಮವಿಮರ್ಶೆ'ಯ ಈ ಕಲ್ಪನೆಯೇ, ಅನಂತರದ ದಿನಗಳಲ್ಲಿ ಅವರು ಕೈಗೊಂಡ ಉಪವಾಸ ಸತ್ಯಾಗ್ರಹಗಳಿಗೆ ಬುನಾದಿಯಾಯಿತು. ಸಾಮಾನ್ಯವಾಗಿ ಸಂತರೆಂದರೆ ನಾವು ಪವಿತ್ರಾತ್ಮರೆಂದೂ, ಅವರ ಸಾಧನೆಗಳು ಅಗೋಚರವೆಂದೂ ನಂಬಿಕೊಂಡಿದ್ದೇವೆ. ಅಂದರೆ, ಅದನ್ನೇನಿದ್ದರೂ ಪ್ರೀತಿ, ನ್ಯಾಯ, ಕರುಣೆ ಇತ್ಯಾದಿಗಳ ಮೂಲಕ ನಾವು ಗ್ರಹಿಸಬಹುದೆನ್ನುವುದು ಇದರ ತಾತ್ಪರ್ಯ. ಹಾಗೆಯೇ, ರಾಜಕಾರಣವೆಂದರೆ ಅದು ಅಧಿಕಾರಕ್ಕಾಗಿನ

ಕಟ್ಟಾಟ ಎಂದುಕೊಂಡಿದ್ದೇವೆ. ಇದೇನೆ ಇರಲಿ, ಆನಿಬೆಸೆಂಟ್ ಅವರು ಏರ್ಪಡಿಸಿದ್ದ ಆ ಅಧಿವೇಶನದಲ್ಲಿ ಗಾಂಧೀಜಿ ಅವರು ರಾಜಕಾರಣಿಗಿಂತ ಹೆಚ್ಚಾಗಿ ಸಂತನಂತೆಯೇ ಮಾತನಾಡಿದರು. ನಿಜ, ಗಾಂಧೀಜಿ ಅವರು ರಾಜಕಾರಣದಲ್ಲಿದ್ದರೂ ಸಂತನಂತೆಯೇ ಇದ್ದರು.

ಆಧ್ಯಾತ್ಮೀಕರಣ

ಗಾಂಧೀಜಿ ಅವರು 'ನನ್ನ ದೃಷ್ಟಿಯಲ್ಲಿ ರಾಜಕಾರಣವೆಂದರೆ, ಅಧ್ಯಾತ್ಮಿಕ ಪ್ರತಿಪಾದನೆಯೇ ಆಗಿದೆ' ಎಂದು ಘೋಷಿಸಿದ್ದರು. ಬಹಳ ಉನ್ನತ ಮಟ್ಟದ ರಾಜಕಾರಣಿಯಾಗಿದ್ದ ಅವರು, ಸಾರ್ವಜನಿಕ ಜೀವನವನ್ನು ಆಧ್ಯಾತ್ಮೀಕರಿಸಿದರಲ್ಲದೆ, ಅದನ್ನು ಹಲವು ಆಯಾಮಗಳಿಂದ ಮೌಲ್ಯಗಳಿಂದ ಸಮೃದ್ಧಗೊಳಿಸಿದರು. ಅವರ ಪಾಲಿಗೆ ನಾವು ಮಾಡುವ ಕೆಲಸದಲ್ಲೂ ಅದನ್ನು ಮಾಡುವ ವಿಧಾನದಲ್ಲೂ ಶುದ್ಧತೆ ಇರಬೇಕಾದದ್ದು ಮುಖ್ಯವಾಗಿತ್ತು. ಇದನ್ನು ಸ್ವತಃ ತಾವೇ ಮಾಡಿ ತೋರಿಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಹೀಗಾಗಿ, ಅವರು "ನೀವು ಈ ಕ್ಷಣದ ಬಗ್ಗೆ ಮಾತ್ರ ಚಿಂತಿಸಿ; ದೃಢವಾಗಿ ಪ್ರಯತ್ನಿಸಿ; ಎಂದಿಗೂ ಪ್ರಯತ್ನವನ್ನು ಕೈಬಿಡಬೇಡಿ; ತಪ್ಪು ಮಾಡಿದವರನ್ನು ಕ್ಷಮಿಸಿ, ಮುಂದಡಿ ಇಡಿ; ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿ" ಎನ್ನುವುದೆಲ್ಲ ಅವರ ಮಾತುಗಳೇ ಆಗಿವೆ. ಇಷ್ಟೇ ಅಲ್ಲ, ಅವರು "ಈ ಜಗತ್ತಿನಲ್ಲಿ ಯಾವ ಬದಲಾವಣೆ ಆಗಬೇಕೆಂದು ನಾವು ಬಯಸುತ್ತೇವೋ ಆ ಬದಲಾವಣೆ ಸ್ವತಃ ನಿಮ್ಮಲ್ಲೇ ಮೊದಲು ಬರಲಿ," ಎಂದು ಹೇಳುತ್ತಿದ್ದರು. ತಮ್ಮ ಕಲ್ಪನೆಯ ಹೊಸ ಸಮಾಜದಲ್ಲಿ ಅವರು ಹೊಸ ಬಗೆಯ ನೈತಿಕತೆಯಿಂದ ಕುಡಿದ ಮನುಷ್ಯನನ್ನು ಕಾಣಬೇಕೆಂಬುದೇ ಅವರ ಇಡೀ ಜೀವಮಾನದ ಹೋರಾಟವಾಗಿತ್ತು. ಇದನ್ನು ಸಾಧಿಸಲು ಅವರು ಸ್ವ-ಇಚ್ಛೆಯಿಂದ ಸರಳತೆ ಮತ್ತು ಬಡತನಗಳನ್ನು ಅಪ್ಪಿಕೊಂಡರು. ಅಲ್ಲದೆ, 'ಆಶ್ರಮವಾಸಿ'ಯಂತೆ ಅವರು ಬದುಕತೊಡಗಿದರು. ಅವರ ನಡೆ-ನುಡಿಗಳಲ್ಲಿ ಕಿಂಚಿತ್ತೂ

ವ್ಯತ್ಯಾಸವಿರಲಿಲ್ಲ. ಅವರಿಗೆ 'ಬಹುದೊಡ್ಡ ನಾಯಕ'ನೆನ್ನುವ ಮನ್ನಣೆಯನ್ನು ತಂದುಕೊಟ್ಟಿದ್ದೇ ಅವರ ವ್ಯಕ್ತಿತ್ವದಲ್ಲಿದ್ದ ಈ ಗುಣವೆಂಬುದನ್ನು ನಾವು ಗಮನಿಸಬೇಕು!.

ನಮ್ಮ ದೇಶಕ್ಕೆ ಯಾವ ಬಗೆಯ ಸ್ವಾತಂತ್ರ್ಯ ಬೇಕು ಎನ್ನುವ ಬಗ್ಗೆ ಗಾಂಧೀಜಿ ಅವರಿಗೆ ಅತ್ಯಂತ ಸ್ಪಷ್ಟವಾದ ಕಲ್ಪನೆ ಇತ್ತು. ಅವರ ದೃಷ್ಟಿಯಲ್ಲಿ, ದೇಶಕ್ಕೆ ಬರೀ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಕಾಗಿರಲಿಲ್ಲ. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಪ್ರಗತಿಯ ಜೊತೆಜೊತೆಯಲ್ಲಿ ಸಾಗಬೇಕು ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿಯೇ ಅವರು, 'ಧರ್ಮದರ್ಶಿತ್ವ'ದಲ್ಲಿ ನಂಬಿಕೆ ಇಟ್ಟಿದ್ದರು. ಶ್ರೀಮಂತರು ತಮ್ಮ ಸಂಪತ್ತಿನ ಧರ್ಮದರ್ಶಿಗಳಾಗಬೇಕು ಎಂದು ಅವರು ಹೇಳುತ್ತಿದ್ದರು. ಅವರ ಈ ಕರೆಗೆ ಓಗೊಟ್ಟು ಬಿರ್ಲಾಗಳು, ಬಜಾಜ್ ವಂಶಸ್ಥರು, ಫಿರೋದಿಯಾಗಳು ತಮ್ಮ ಔದ್ಯಮಿಕ ಚಟುವಟಿಕೆಗಳಲ್ಲಿ ಈ 'ಧರ್ಮದರ್ಶಿತ್ವ'ದ ಪರಿಕಲ್ಪನೆಯನ್ನು ಅಳವಡಿಸಿಕೊಂಡರು. ಅನಂತರ ತಮ್ಮ ಸಂಪತ್ತಿನ ಗಮನಾರ್ಹ ಭಾಗವನ್ನು ದೇಶಕ್ಕೆ ಸಮರ್ಪಿಸಿದರು. ಯಾವುದೇ ಒಂದು ನೀತಿ ಅಥವಾ ತೀರ್ಮಾನವನ್ನು ಸರಿಯೋ, ತಪ್ಪೋ ಎಂದು ಅಳೆಯಲು ಗಾಂಧೀಜಿ ಒಂದು ಅದ್ಭುತ ತಂತ್ರವನ್ನು ಅನುಸರಿಸುತ್ತಿದ್ದರು. ಇದರ ಅನುಸಾರವಾಗಿ ಅವರು "ನೀವು ಯಾವುದೇ ಒಬ್ಬ ಬಡವನನ್ನು ನೋಡಿದ ಕ್ಷಣದಲ್ಲಿ, ನೀವಿಡುವ ಒಂದು ಹೆಜ್ಜೆಯಿಂದ ಅವನಿಗೇನಾದರೂ ಉಪಯೋಗವಾಗುತ್ತದೆಯೇ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ ಎಂದು ಕರೆಕೊಟ್ಟರು. ಗಾಂಧೀಜಿ ಅವರ ಸ್ವರಾಜ್ಯದ ಕಲ್ಪನೆಯು 'ಬಡವರ ಸ್ವರಾಜ್ಯ'ವಾಗಿತ್ತು. ಈ ಬಗ್ಗೆ ಅವರು "ನನ್ನ ತಾತ್ವಿಕತೆ ತುಂಬಾ ಸರಳ. ನಮ್ಮ ದೇಶದಲ್ಲಿ ಬ್ರಿಟಿಷರು ಯಾವ ಆದೇಶವನ್ನು ಹೊರಡಿಸಲೂ ನಾನು ಬಿಡುವುದಿಲ್ಲ," ಎಂದು ಹೇಳುತ್ತಿದ್ದರು. ಬದುಕಿನ ಅಗತ್ಯಗಳಿಗೆ ಸಂಬಂಧಿಸಿದಂತೆ ಸಮತೋಲನವನ್ನು ಸಾಧಿಸುವುದು ಅವರ ಈ ತಾತ್ವಿಕತೆಯ

ಕೇಂದ್ರವಾಗಿತ್ತು. ಅಂದರೆ, ಬದುಕಿನಲ್ಲಿ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಅವರು ಪ್ರಮುಖ್ಯತೆ ನೀಡಿದ್ದರು. ಸಕಲರ ಕಲ್ಯಾಣವನ್ನೂ ಒಳಗೊಂಡಿದ್ದ ಸರ್ವೋದಯ ತತ್ವದ ಬಗ್ಗೆ ಗಾಢ ಆಸಕ್ತಿ ಹೊಂದಿದ್ದ ಅವರು, ಅದರ ಮೂರು ಪ್ರಾಥಮಿಕ ಅಂಶಗಳನ್ನು ಹೀಗೆ ಹೇಳಿದ್ದಾರೆ.

* **ಸಮಷ್ಟಿಯ (ಎಲ್ಲರ) ಒಳಿತಿನಲ್ಲೇ ವ್ಯಷ್ಟಿಯ (ಒಬ್ಬ ವ್ಯಕ್ತಿಯ) ಒಳಿತು ಅಡಗಿದೆ.**
* **ತಮ್ಮ ಕಾಯಕದಿಂದ ತಮ್ಮ ಜೀವನೋಪಾಯಕ್ಕೆ ಬೇಕಿರುವಷ್ಟು ಸಂಪಾದನೆ ಮಾಡುವ ಹಕ್ಕು ಎಲ್ಲರಿಗೂ ಇದೆ.**
* **ಕಾಯಕದ ಶ್ರಮದಿಂದ ಕೂಡಿರುವ ಜೀವನವೇ ಶ್ರೇಷ್ಠ.**

ಗಾಂಧೀಜಿ ಅವರು ಹಲವು ಮತಧರ್ಮಗಳ ಸೌಹಾರ್ದದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಹೀಗಾಗಿ, ಅವರು ಸಕಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಅವರ ಪ್ರಕಾರ, ಕೋಮುಗಲಭೆಗಳು ಹೇಡಿಗಳು ಮಾಡುವ ಕೆಲಸವಾಗಿತ್ತು. ಅಲ್ಲದೆ, ಯಾವ ಧರ್ಮದಲ್ಲೂ ಗೂಂಡಾಗಿರಿಗೆ ಆಸ್ಪದವಿಲ್ಲ ಎಂದು ಹೇಳುತ್ತಿದ್ದ ಅವರು, ಪ್ರತೀ ಧರ್ಮವನ್ನೂ ಗೌರವಿಸಬೇಕೆಂಬ ನಂಬಿಕೆಯನ್ನು ರೂಢಿಸಿಕೊಂಡಿದ್ದರು. ಅವರ ಪ್ರಕಾರ, ಮತಧರ್ಮಗಳ ಹೆಸರಿನ ಸಂಕುಚಿತವಾದಕ್ಕಿಂತ ದೇಶವನ್ನು ಪ್ರೀತಿಸುವ ರಾಷ್ಟ್ರೀಯತೆ ಮುಖ್ಯವಾಗಿತ್ತು. ಹೀಗಾಗಿ ಅವರು, "ಮೊದಲಿಗೆ ನಾವೆಲ್ಲರೂ ಭಾರತೀಯರು; ಆಮೇಲಷ್ಟೆ ಹಿಂದೂಗಳು, ಮುಸ್ಲಿಮರು," ಎಂದು ಪ್ರತಿಪಾದಿಸುತ್ತಿದ್ದರು. ಅವರು, ಅಲ್ಪಸಂಖ್ಯಾತರು ಕೂಡ ಸುರಕ್ಷಿತವಾಗಿ ಬದುಕುವಂಥ ಸಮಾನ ಪೌರತ್ವದ ಕಲ್ಪನೆಯನ್ನು ನಮಗೆ ನೀಡಿದ್ದಾರೆ. ಗಾಂಧೀಜಿ ಅವರು ನಡೆಸುತ್ತಿದ್ದ ಪ್ರತಿಯೊಂದು ರಾಜಕೀಯ ಸಭೆಯಲ್ಲೂ ಆಶ್ರಮದ ಭಜನೆ ನಡೆಯುತ್ತಿತ್ತು. ಈ ಭಜನೆಗಳು 'ಸಬ್ ಕೋ ಸನ್ಮತಿ ದೇ ಭಗವಾನ್' ಎನ್ನುವ ಉದಾತ್ತ ಆಲೋಚನೆಯಿಂದ ಕೂಡಿರುತ್ತಿದ್ದವು.

ಸಬ್ ಕೋ ಸನ್ಮತಿ

ಗಾಂಧೀಜಿ ಅವರು, ಸಾಧಿಸಲು ತುಂಬಾ ಕಷ್ಟಕರವಾದ, ಆದರೆ ತಾವು ಮಾತ್ರ ಯಶಸ್ವಿಯಾಗಿ ಮಾಡಿ ತೋರಿಸಿದ ಐದು ಅಂಶಗಳಿಗೆ ಜಗತ್ತಿನೆಲ್ಲೆಡೆ ಮನೆಮಾತಾಗಿದ್ದಾರೆ. ಅವು ಯಾವುವೆಂದರೆ–

* **ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ತೋರಿಸುವುದು.**
* **ಈ ಸಮಾಜವು ಯಾರನ್ನು ಹೊರಗಿಟ್ಟಿದೆಯೋ ಅವರನ್ನು ಸೇರಿಸಿಕೊಳ್ಳುವುದು.**
* **ಬೇರೆ ಯಾರಾದರೂ ತಪ್ಪು ಮಾಡಿದರೆ ಅದನ್ನು ಉದಾರವಾಗಿ ಮರೆತುಬಿಡುವುದು.**
* **ನಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು.**
* **ಡಾಂಭಿಕತೆಯನ್ನು ಬಿಟ್ಟು ಸರಳವಾಗಿರುವುದು.**

ಗಾಂಧೀಜಿ ಅವರು ಆಧ್ಯಾತ್ಮಿಕತೆಗೂ ಮೌಲಿಕವಾದ ಕೊಡುಗೆಯನ್ನು ನೀಡಿದ್ದು, ಆ ಅಂಶಗಳು ಕೆಳಕಂಡಂತಿವೆ–

* **ಸತ್ಯ ಮತ್ತು ಅಹಿಂಸೆ.**
* **ಕೇಡು/ಕೆಡುಕಿನೊಂದಿಗೆ ಅಸಹಕಾರ.**
* **ಶಾಂತಿಗಾಗಿ ಯಾವುದೇ ನೋವನ್ನು ಅನುಭವಿಸುವುದು/ ಪ್ರಾಣತ್ಯಾಗವನ್ನಾದರೂ ಮಾಡುವುದು.**
* **ಶಾಂತಿ ಮತ್ತು ನ್ಯಾಯದ ಪ್ರತಿಪಾದನೆಯಲ್ಲಿ ನಂಬಿಕೆ.**
* **ಪ್ರಾರ್ಥನೆ ಮತ್ತು ಧ್ಯಾನದಲ್ಲಿ ನಂಬಿಕೆ.**
* **ಆಧ್ಯಾತ್ಮಿಕ ಶ್ರೇಯಸ್ಸನ್ನು ಗಳಿಸಲು ವ್ಯಕ್ತಿಗತ ಪ್ರಾಮಾಣಿಕತೆ ಅತ್ಯಗತ್ಯ ಎಂಬುದರ ಅರಿವು.**
* **ಸಮಾಜದ ಬಡವರು ಮತ್ತು ದುರ್ಬಲರೊಂದಿಗೆ ಒಂದಾಗುವುದು.**
* **ಕೆಲಸವನ್ನು ಮಾಡು. ಆದರೆ, ಅದರ ಫಲದ ಬಗ್ಗೆ ಯೋಚಿಸಬೇಡ**

ಎಂಬ ಭಗವದ್ಗೀತೆಯ ಮಾತಿನಲ್ಲಿ ನಂಬಿಕೆ.

* **ಪ್ರತಿಯೊಂದು ಧರ್ಮವೂ ಸತ್ಯದಿಂದ ಕೂಡಿದ್ದು, ಗೌರವಕ್ಕೆ ಅರ್ಹವಾಗಿದೆ.**

* **ರಾಜಕಾರಣ ಮತ್ತು ಸಾಮಾಜಿಕ ಜೀವನದಲ್ಲಿ ನಿರ್ಭೀತವಾಗಿ ಸತ್ಯದ ಅನುಸರಣೆ ಮಾಡುವುದು.**

ರಾಜಕಾರಣದ ಆಧ್ಯಾತ್ಮೀಕರಣ

ಗಾಂಧೀಜಿ ಅವರು ಆಧುನಿಕ ಭಾರತದ ರಾಜಕಾರಣಕ್ಕೆ ಮೌಲಿಕ ಪರಿಭಾಷೆಯನ್ನೇ ನೀಡಿದರು. ಅವನ್ನು ಹೀಗೆ ಹೇಳಬಹುದು–

* **ಹಿಂದೂ ಮಹಾಸಭಾ ಪ್ರತಿಪಾದಿಸುತ್ತಿದ್ದ 'ಸಾಂಸ್ಕೃತಿಕ ರಾಷ್ಟ್ರೀಯತೆ' ಮತ್ತು ಮಹಮದ್ ಅಲಿ ಜಿನ್ನಾ ಹೇಳುತ್ತಿದ್ದ 'ಧಾರ್ಮಿಕ ರಾಷ್ಟ್ರೀಯತೆ'ಗೆ ಬದಲಾಗಿ 'ನಾಗರಿಕ ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ಮುಂಚೂಣಿಗೆ ತಂದಿದ್ದು ಗಾಂಧೀಜಿ ಅವರ ಮಹತ್ತರ ಕೊಡುಗೆಯಾಗಿದೆ.**
* **ವಿಕೇಂದ್ರೀಕೃತ ಸಂಸದೀಯ ಸ್ವರಾಜ್ಯದ ಸ್ಥಾಪನೆ.**
* **ಭಾರತೀಯ ಆಯಾಮವುಳ್ಳ ಮಾನವ ಹಕ್ಕುಗಳು.**
* **ಆರ್ಥಿಕ ಪ್ರಗತಿಯ ಜೊತೆಯಲ್ಲೇ ರಾಜಕೀಯ ಸ್ವಾತಂತ್ರ್ಯ ಸಾಗಬೇಕು.**

ನಮ್ಮ ರಾಜಕಾರಣದಲ್ಲಿರುವ ಹಿಂಸೆಯು ಕ್ರಮೇಣ ಕಡಿಮೆಯಾಗಬೇಕು ಎನ್ನುತ್ತಿದ್ದ ಗಾಂಧೀಜಿ, ಈ ನಿಟ್ಟಿನಲ್ಲಿ ಮಾಡಿದ ಪ್ರತಿಪಾದನೆಗಳು ಹೀಗಿವೆ–

* **ಸ್ಥಳೀಯ ಹಂತದವರೆಗೂ ಸಾಂವಿಧಾನಿಕ ಸರಕಾರ ರಚನೆ.**
* **ನಿಷ್ಪಕ್ಷಪಾತವಾಗಿ ಕೆಲಸ ಮಾಡುವ, ರಚನಾತ್ಮಕ ವ್ಯಕ್ತಿಗಳ ಪಡೆ.**
* **ಕೆಲವು ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ ನಾಗರಿಕ ಅಸಹಕಾರ.**

* ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆಯಡಿ ಸೇವಾ ಮನೋಭಾವದೊಂದಿಗೆ ಪಕ್ಷ ರಾಜಕಾರಣ.

ರಾಜಕೀಯವನ್ನು ಆಧ್ಯಾತ್ಮೀಕರಿಸಿದ ಗಾಂಧೀಜಿ, ಈ ಬಗ್ಗೆ ಆಡುತ್ತಿದ್ದ ಮನೋಜ್ಞವಾದ ಮಾತುಗಳು ಹೀಗಿವೆ:

* ನನ್ನ ಪಾಲಿಗೆ ದೇವರೆಂದರೆ ಸತ್ಯ ಮತ್ತು ಪ್ರೀತಿ; ದೇವರೆಂದರೆ ನ್ಯಾಯ–ನೀತಿ; ದೇವರೆಂದರೆ, ನಿರ್ಭೀತಿಯ ಸ್ಥಿತಿ.
* ರಾಜಕಾರಣದಲ್ಲಿರುವ ನನ್ನ ಸ್ನೇಹಿತರು ರಾಜಕೀಯದ ನನ್ನ ಕಲ್ಪನೆಯಿಂದ ಹತಾಶರಾಗಿದ್ದು, ಇದು ನನ್ನ ಧರ್ಮದಿಂದ ಒಡಮೂಡಿದೆ ಎನ್ನುತ್ತಾರೆ. ಅವರ ಮಾತು ಸರಿಯಾಗಿಯೇ ಇದೆ. ಏಕೆಂದರೆ, ಧರ್ಮವೇ ನನ್ನ ಪ್ರತಿಯೊಂದೂ ಚಟುವಟಿಕೆಗಳ ಮೂಲವಾಗಿದೆ. ಯಾವುದೇ ಒಬ್ಬ ಧಾರ್ಮಿಕ ವ್ಯಕ್ತಿಯ ಸಮಸ್ತ ಚಟುವಟಿಕೆಗಳೂ ಅವನ ಧರ್ಮದ ಅಂತರಂಗದಿಂದಲೇ ಹುಟ್ಟಬೇಕು. ಏಕೆಂದರೆ, 'ಧರ್ಮ'ವೆಂದರೆ, ಆ ದೇವರಿಗೆ ತಲೆಬಾಗುವುದೇ ಆಗಿದೆ. ಇಷ್ಟೇ ಅಲ್ಲ, ನಿಮ್ಮ ಕಣಕಣವನ್ನೂ ಆ ದೇವರೇ ಆಳುತ್ತಿರುತ್ತಾನೆ.
* ಇನ್ನೊಬ್ಬರಿಗೆ ನ್ಯಾಯವನ್ನು ಒದಗಿಸುವ ಮೂಲಕ ನಾವು ನ್ಯಾಯವನ್ನು ಪಡೆಯಬಹುದು ಎನ್ನುವುದು ನನ್ನ ಅನುಭವದಿಂದ ದೃಢಪಟ್ಟಿದೆ.
* ನಿರ್ಭೀತಿಯೇ ಆಧ್ಯಾತ್ಮಿಕತೆಯ ಮೊಟ್ಟಮೊದಲ ಗುಣ. ಹೇಡಿಗಳು ಎಂದಿಗೂ ನೈತಿಕತೆಯನ್ನು ಹೊಂದಿರಲಾರರು. ಎಲ್ಲಿ ಭಯವಿರುತ್ತದೋ ಅಲ್ಲಿ ಧರ್ಮವಿರುವುದಿಲ್ಲ.
* ನಾವು ಮಾಡಿದ ತಪ್ಪುಗಳನ್ನು ದೊಡ್ಡದಾಗಿ ಬಿಂಬಿಸಿಕೊಳ್ಳಬೇಕು; ಹಾಗೆಯೇ, ಇತರರು ಮಾಡಿದ ತಪ್ಪುಗಳನ್ನು ಆದಷ್ಟೂ ಮರೆತುಬಿಡಬೇಕು. ಆತ್ಮ ಶುದ್ಧೀಕರಣಕ್ಕೆ ಇದಕ್ಕಿಂತ ಅತ್ಯುತ್ತಮ ಮಾರ್ಗವಿಲ್ಲ– ಇದೇ ಬದುಕಿನ ಸುವರ್ಣ ನಿಯಮ.
* ಸೋಲಾಗಲಿ, ಗೆಲುವಾಗಲಿ ನಮ್ಮ ಕೈಯಲ್ಲಿಲ್ಲ. ಅವೆಲ್ಲವೂ

ಇರುವುದು ಆ ಭಗವಂತನ ಕೈಯಲ್ಲಷ್ಟೆ. ಹೀಗಾಗಿ ನಮ್ಮನ್ನು ನಾವು ಅವನಿಗೆ ಅರ್ಪಿಸಿಕೊಳ್ಳೋಣ. ಏಕೆಂದರೆ, ಎಲ್ಲವನ್ನೂ ಆತನ ಇಚ್ಛೆಯೇ ನಿರ್ಧರಿಸುತ್ತದೆ.

* ನಾನೊಬ್ಬ ಸಂತನಾಗಿದ್ದು, ರಾಜಕಾರಣದಲ್ಲಿ ನಾನು ಅಪ್ರಸ್ತುತವಾಗುತ್ತಿದ್ದೇನೆ ಎಂದು ಉಳಿದವರು ನನ್ನ ಬಗ್ಗೆ ಹೇಳುತ್ತಾರೆ. ಆದರೆ, 'ನಾನೊಬ್ಬ ರಾಜಕಾರಣಿಯಾಗಿದ್ದು, ಸಂತನಾಗಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ' ಎಂದು ನಾನು ಅವರಿಗೆಲ್ಲ ಹೇಳುತ್ತೇನೆ.

ಗಾಂಧೀಜಿ, ಭಾರತದ ಬಗ್ಗೆ ತಮ್ಮದೇ ಆದ ಕಲ್ಪನೆಯನ್ನು ಹೊಂದಿದ್ದರು. ಅದು ಕೆಳಕಂಡಂತಿದೆ–

* ನನ್ನ ಕನಸಿನ ಭಾರತದಲ್ಲಿ ಕಡುಬಡವರಿಗೆ ಕೂಡ ಇದು ನಮ್ಮ ದೇಶವೆನ್ನುವ ಭಾವನೆ ಇರಬೇಕು. ಜೊತೆಗೆ, ಇಲ್ಲಿ ಮೇಲ್ವರ್ಗ, ಕೆಳವರ್ಗ ಎನ್ನುವ ತಾರತಮ್ಯ ಇರಬಾರದು. ಇಲ್ಲಿ ಎಲ್ಲ ಸಮುದಾಯಗಳೂ ಪರಸ್ಪರ ಸೌಹಾರ್ದದಿಂದ ಬದುಕಬೇಕು. ಇಂಥ ಭಾರತದಲ್ಲಿ ಅಸ್ಪೃಶ್ಯತೆಗಾಗಲಿ, ಕುಡಿತಕ್ಕಾಗಲಿ ಕಿಂಚಿತ್ತೂ ಆಸ್ಪದವಿರಬಾರದು. ಪುರುಷರಂತೆಯೇ ಮಹಿಳೆಯರಿಗೂ ಎಲ್ಲಾ ಹಕ್ಕುಗಳೂ ಇರಬೇಕು. ಜಗತ್ತಿನೊಂದಿಗೆ ನಾವು ಸದಾ ಶಾಂತಿಯಿಂದ ಇರಬೇಕು..."

ಹೀಗೆ ಗಾಂಧೀಜಿ ಅವರು ತಮ್ಮ ಹತ್ಯೆಗೂ ಕೇವಲ ಮೂರು ದಿನಗಳ ಹಿಂದೆ 'ಹರಿಜನ' ಪತ್ರಿಕೆಯಲ್ಲಿ "ನಾವು ರಾಜಕೀಯ ಸ್ವಾತಂತ್ರ್ಯವನ್ನೇನೋ ಪಡೆದುಕೊಂಡಿದ್ದೇವೆ. ಆದರೆ ನಾವಿನ್ನೂ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕಾಗಿದೆ," ಎಂದು ಬರೆದಿದ್ದರು.

ಗಾಂಧೀಜಿ ಅವರ ಈ ಆಧ್ಯಾತ್ಮೀಕರಣಗೊಂಡ ರಾಜಕಾರಣವು ದೂರಗಾಮಿಯಾಗಿದ್ದು, ನಮ್ಮ ದೇಶದ ಎಲ್ಲೆಕಟ್ಟುಗಳನ್ನು ಮೀರಿ, ಜಗತ್ತಿನಾದ್ಯಂತ ಪಸರಿಸುತ್ತಿದೆ. 2010ರಲ್ಲಿ ಮುಂಬೈನ ಗಾಂಧಿ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ, "ಗಾಂಧೀಜಿ ಕೇವಲ ಭಾರತಕ್ಕೆ ಮಾತ್ರ ನಾಯಕರಲ್ಲ, ಅವರು ಇಡೀ ವಿಶ್ವದ ನಾಯಕರು," ಎಂದು ಬರೆದಿದ್ದರು. 'ಟೈಮ್ಸ್' ಪತ್ರಿಕೆಯು 1999ರಲ್ಲಿ ತಾನು ಪ್ರಕಟಿಸಿದ್ದ ಲೇಖನವೊಂದರಲ್ಲಿ "ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ದಲಾಯಿ ಲಾಮಾ, ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲ ಮುಂತಾದವರೆಲ್ಲ ಗಾಂಧೀಜಿ ಅವರು ಪ್ರತಿಪಾದಿಸುತ್ತಿದ್ದ ಅಹಿಂಸಾ ತತ್ವದ ಆಧ್ಯಾತ್ಮಿಕ ವಾರಸುದಾರರು," ಎಂದು ಬಣ್ಣಿಸಿತ್ತು. ಇಂಥ ಮಹಾತ್ಮ ಗಾಂಧೀಜಿ ಅವರ ಜನ್ಮದಿನವಾದ ಅಕ್ಟೋಬರ್ 2ನೇ ತಾರೀಖನ್ನು ವಿಶ್ವಸಂಸ್ಥೆಯು 'ಅಂತರರಾಷ್ಟ್ರೀಯ ಅಹಿಂಸಾ ದಿನ'ವೆಂದು ಘೋಷಿಸಿದೆ. ನಮ್ಮ ಬದುಕಿನ ರೀತಿನೀತಿಗಳಿಗೆ ಇದಕ್ಕಿಂತ ಹೆಚ್ಚಿನ ಮನ್ನಣೆ ಇನ್ನೇನು ಬೇಕು ಹೇಳಿ?

'ವಿಶ್ವ ತತ್ತ್ವಶಾಸ್ತ್ರ ದಿನ'ದಂದು, ಈ ಪವಿತ್ರ ಸಂದರ್ಭದಲ್ಲಿ, ನನ್ನ ಕೆಲವು ಆಲೋಚನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಅವಕಾಶ ಕೊಡುವ ಮೂಲಕ ನೀವು ನನ್ನನು ಗೌರವಿಸಿದ್ದೀರಿ.

ಎಲ್ಲರಿಗೂ ನಮಸ್ಕಾರ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	02.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋಯರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್‌ನ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ,	

ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿಗಾಗಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಸೇವೆಗಾಗಿ ನಿಧಿ ಸಂಗ್ರಹಣೆ	1933
ಹರಿಜನ್ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00

27.	ಪ್ರಾರ್ಥನೆ	25-00
28.	ಗಾಂಧೀ ಮತ್ತು ಕರ್ನಾಟಕ	200-00
29.	ಸತ್ಯ	30-00
30.	ವಿದ್ಯಾರ್ಥಿಗಳಿಗಾಗಿ	30-00
31.	ಸರ್ವೋದಯ	30-00
32.	ಖಾದಿ ಗ್ರಾಮೋದ್ಯೋಗ	30-00
33.	ನನ್ನ ಬಾಲ್ಯದ ನೆನಪುಗಳು	30-00
34.	ಗ್ರಾಮರಾಜ್ಯ ಆಡಳಿತ	5-00
35.	ನನ್ನ ಕನಸಿನ ಸ್ವರಾಜ್ಯ	5-00
36.	ಗಾಂಧೀ ಮತ್ತು ಹಾಸ್ಯ	20-00
37.	ನನ್ನ ಆದರ್ಶಗ್ರಾಮ	5-00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48-00
39.	ಸತ್ಯಾಗ್ರಹಿ	40-00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
43.	ಸತ್ಯಾಗ್ರಹ	5-00
44.	ಹಿಂದ್ ಸ್ವರಾಜ್	5-00
45.	ಆರೋಗ್ಯ	5-00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
47.	ಬಹುರೂಪಿ ಗಾಂಧಿ	10-00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
49.	ಕೃತಯುಗಿ ವಿನೋಬಾ ಭಾವೆ	15-00
50.	ಮೋಹನ ತರಂಗ	40-00
51.	ನಮ್ಮ ಗಾಂಧಿ ತಾತ	5-00

52.	ಗೀತಾ ಪ್ರವಚನ	80-00
53.	ಜೆ.ಪಿ. ಜೀವನ ಹಾದಿ	45-00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	ಲೋಕ ಚಿಂತಕರು	145.00
57.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
58.	ಮಹದೇವ ದೇಸಾಯಿ	63.00
59.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
60.	Temple & Mosque	10-00
61.	Rastrapita Mahatma Gandhi	25-00
62.	Swarajya of My Dreams	5-00
63.	Gandhi My Grand Father	5-00
64.	Grand Pa Gandhi	5-00
65.	Relevance of Gandhi	20-00
66.	Vinoba Sage of the age	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ

● ಬೆಳಗಾವಿ	ದಿ. 01-04-1927
	ದಿ. 18-04-1027 ರಿಂದ
	ದಿ. 19-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ
	ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ. 19-07-1927 ರಿಂದ
	ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 22-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ
	ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕಾನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ
	ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕೆರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934

● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
● ಪೊನ್ನಂಪೇಟೆ, ಮದಿಕೇರಿ	ದಿ. 22-02-1934
● ವಿರಾಜಪೇಟೆ, ಬೆಳ್ಳೂರು	ದಿ. 23-02-1934
● ಸೋಮವಾರ ಪೇಟೆ	
● ಗುಂಡುಕಟ್ಟೆ	
● ಮಡಿಕೇರಿ, ಸಂಪಾಜೆ, ಸುಳ್ಯ	ದಿ. 24-02-1934
● ಪುತ್ತೂರು, ಉಪ್ಪಿನಂಗಡಿ	
● ವಿಠಲಗಬ್ಬ, ಕಲ್ಲಡ್ಕ, ಪಾಣೆ	
● ಮಂಗಳೂರು, ಬಂಟ್ವಾಳ	
● ಮಂಗಳೂರು	
● ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಾಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934
● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934

- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ
- ಬೆಳಗಾವಿ ದಿ. 05-03-1934
- ಬೆಳಗಾವಿ ದಿ. 06-03-1934
- ಬೆಳಗಾವಿ, ಯಮಕನಮರಡಿ ದಿ. 07-03-1934
  ಹುಕ್ಕೇರಿ, ಗೋಕಾಕ, ಸಂಕೇಶ್ವರ
  ನವಲೀಹಾಳ, ಚಿಕ್ಕೋಡಿ, ಅಂಕಲಿ
- ಶೆಡಬಾಳ, ಬನಹಟ್ಟಿ, ಅಥಣಿ ದಿ. 08-03-1934
  ಬಿಜಾಪುರ (ವಿಜಯಪುರ),
  ತಿಕೋಟ, ತೊರವಿ ಇಳಕಲ್
- ನಂದಿ ಬೆಟ್ಟ 10-05-1936 ರಿಂದ
  30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, 31-05-1936
  ಚಿಂತಾಮಣಿ ಕೋಲಾರ,
  ಬಂಗಾರ ಪೇಟೆ, ಕೆ. ಜಿ. ಎಫ್
- ಬೆಂಗಳೂರು 01-06-1936 ರಿಂದ
  12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ 16-04-1937 ರಿಂದ
  21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು	**Seven Social Sins**
ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Leprocy**
ವಿದ್ಯಾರ್ಥಿ	**Students**

ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಿದ ಪ್ರಸಂಗಗಳನ್ನೂ ಘಟನೆಗಳನ್ನೂ ಇಲ್ಲಿ ಹೇಳಿದ್ದಾರೆ. ಅವರ ಪ್ರತಿ ಹೆಜ್ಜೆಯು ಆಧ್ಯಾತ್ಮಿಕವೇ ಆದ ಬಗೆಗಳನ್ನು ಇಲ್ಲಿ ತಿಳಿಸಿದ್ದಾರೆ. ನಮ್ಮ ನಾಡಿನ ಪ್ರತಿಯೊಬ್ಬ ರಾಜಕಾರಣಿಯೂ ಈ ಹೊತ್ತಿಗೆಯನ್ನು ಓದಬೇಕು. ರಾಷ್ಟ್ರ-ಅಧ್ಯಾತ್ಮ-ಸಮಾಜ ತ್ರಿವಳಿ ಗೀತೆಗಳ ನಡುವೆ ಅವರು ಧ್ಯಾನಸ್ಥರಾಗಬೇಕು. ಇಂಥದೊಂದು ಅಪೂರ್ವ ಕಿರುಹೊತ್ತಿಗೆಯನ್ನು ರಚಿಸಿಕೊಟ್ಟ ಡಾ. ವೂಡೇ ಪಿ. ಕೃಷ್ಣ ಅವರಿಗೆ ಕೃತಜ್ಞತೆಗಳು.

- ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ರಾಜಕಾರಣವೂ ಸತ್ಯ, ಸರಳತೆ, ಅಹಿಂಸೆ, ನಿರ್ಭೀತಿತನ, ಸಮಷ್ಟಿಪ್ರಜ್ಞೆ, ಪ್ರೀತಿ, ಕಾಯಕ, ಪ್ರಾಮಾಣಿಕತೆ, ನ್ಯಾಯದ ನಡೆ ಮತ್ತು ಎಲ್ಲರನ್ನೂ ಒಳಗೊಳ್ಳುವಿಕೆ, ತತ್ವದ ಆಧಾರದ ಮೇಲಿದ್ದಾಗಲೇ, ಅದು ಅಧ್ಯಾತ್ಮಿಕತೆಯ ಹಾದಿಯಲ್ಲಿ ಸಾಗುತ್ತಿದೆ ಎಂದೇ ಹೇಳಬಹುದೆಂಬುದನ್ನು ಇದರಲ್ಲಿ ಮನೋಜ್ಞವಾಗಿ ತಿಳಿಸಲಾಗಿದೆ. ಎಲ್ಲಾ ರಾಜಕೀಯ ನೇತಾರರು, ದಾರ್ಶನಿಕರು, ರಾಜಕೀಯ ಮುತ್ಸದಿಗಳು, ಈ ಮಾರ್ಗದಲ್ಲಿ ನಡೆದಾಗ ಮಾತ್ರ ಗಾಂಧೀಜಿ ಅವರ ಆಶಯದ ಭಾರತದ ನಿರ್ಮಾಣವಾಗುವಲ್ಲಿ ಎಳ್ಳಷ್ಟೂ ಸಂಶಯವಿರುವುದಿಲ್ಲ. ಅಂಥಹ ಆದರ್ಶದ ಭಾರತವನ್ನು ಆಶಿಸಿ, ರಚಿಸಿದ ಈ ಕೃತಿ ಸರ್ವ ಮಾನ್ಯವಾಗಲಿ ಎಂದು ಹಾರೈಸುತ್ತೇನೆ.

- ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ISBN No : 978-81-941136-0-7